# ಕರ್ನಾಟಕ ಪಬ್ಲಿಕ್ ಸ್ಕೂಲ್ (ಪ್ರೌಢ ವಿಭಾಗ) ಧನ್ನೂರ ತಾ.ಹುನಗುಂದ ಜಿ.ಬಾಗಲಕೋಟ

## ಸೇತುಬಂಧ ಪರೀಕ್ಷೆ (ಸಾಫಲ್ಯ ಪರೀಕ್ಷೆ) – 2025-2026

**ವರ್ಗ: 8** **ವಿಷಯ: ಕನ್ನಡ** **ದಿನಾಂಕ: -06-2025**

| | | |
|---|---|---|
| **ವಿದ್ಯಾರ್ಥಿ/ನಿ ಹೆಸರು :** | | **ಹಾಜರಿ ಸಂಖ್ಯೆ :** |
| **ಒಟ್ಟು ಎ ಶ್ರೇಣಿ :** | **ಒಟ್ಟು ಬಿ ಶ್ರೇಣಿ :** | **ಮೌಲ್ಯಮಾಪಕರ ಸಹಿ :** |

*** ಕೊಟ್ಟಿರುವ ನಾಣ್ಣುಡಿ, ಪದಪುಂಜ, ನುಡಿಗಟ್ಟು, ಸೌಮ್ಯೋಕ್ತಿ ಪದಗಳನ್ನುಗಳನ್ನು ಪುನಃ ತಪ್ಪಿಲ್ಲದೇ ಬರೆಯಿರಿ.**

1) ಹಿತ್ತಲ ಗಿಡ ಮದ್ದಲ್ಲ **ಉತ್ತರ:**______________________
2) ಪಾರಾಯಾಣ ಮಾಡು **ಉತ್ತರ:**______________________
3) ಆಶ್ಚರ್ಯಚಕಿತನಾಗು **ಉತ್ತರ:**______________________
4) ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ? **ಉತ್ತರ:**______________________

*** ಕೊಟ್ಟಿರುವ ಗದ್ಯಭಾಗವನ್ನು ಓದಿಕೊಂಡು, ಮುಂದಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

"ಜಗತ್ತು ಪೂಜಿಸುವುದು ಶಕ್ತಿಯನ್ನು; ದುರ್ಬಲತೆಯನ್ನಲ್ಲ" ಎಂಬುದನ್ನು ಯುವಕರು ಸರಿಯಾಗಿ ತಿಳಿದಿರಬೇಕು. "ಶಕ್ತನಾದರೆ ನೆಂಟರೆಲ್ಲ ಹಿತರು; ಅಶಕ್ತನಾದರೆ ಆಪ್ತ ಜನರೇ ವೈರಿಗಳು" ಎಂದು ಪುರಂದರದಾಸರು ಹೇಳಿದ್ದಾರೆ. ದೇಹ, ಮನಸ್ಸು ಸರಿಯಾಗಿರುವ ನಾವು ನಮಗೆ ಕೊಡಮಾಡಿದ ಅವಕಾಶಗಳನ್ನು ಸರಿಯಾಗಿ ಉಪಯೋಗಿಸಿಕೊಂಡು ನಮ್ಮ ಶಕ್ತಿಯನ್ನು ಸರ್ವತೋಮುಖವಾಗಿ ಹೆಚ್ಚಿಸಿಕೊಳ್ಳಬೇಕು. ದೈಹಿಕ, ಮಾನಸಿಕ, ಬೌದ್ಧಿಕ ಹಾಗೂ ನೈತಿಕ ಬಲಗಳ ಜೊತೆಗೆ ನಾವು ಆತ್ಮಶಕ್ತಿಯನ್ನು ಬೆಳೆಸಿಕೊಳ್ಳಬೇಕು. "ಶಕ್ತಿಯೇ ಜೀವನ; ದುರ್ಬಲತೆಯೇ ಮರಣ" ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ಇದೊಂದು ದೊಡ್ಡ ಸತ್ಯ. ದುರ್ಬಲನು ತಾನು ನಾಶವಾಗುವುದಲ್ಲದೆ ಇತರರಲ್ಲಿ ಶೋಷಣೆ ಮತ್ತು ಹಿಂಸೆಯ ಪ್ರವೃತ್ತಿಯನ್ನು ಹುಟ್ಟಿಸುತ್ತಾನೆ. ನಮ್ಮ ಪರಂಪರೆಯು ನೀಡುವ ಮುಖ್ಯ ಬೋಧನೆಯೇ ಶಕ್ತಿಯನ್ನು ಬೆಳೆಸಿಕೊಳ್ಳಿ ಎಂಬುದಾಗಿದೆ.

**ಪ್ರಶ್ನೆಗಳು :**

5) ಯುವಕರು ಸರಿಯಾಗಿ ತಿಳಿದಿರಬೇಕಾದುದು ಏನು? **ಉತ್ತರ:**______________________
6) "ಶಕ್ತನಾದರೆ ನೆಂಟರೆಲ್ಲ ಹಿತರು; ಅಶಕ್ತನಾದರೆ ಆಪ್ತ ಜನರೇ ವೈರಿಗಳು" ಎಂದು ಹೇಳಿದವರು ಯಾರು? **ಉತ್ತರ:**______________________
7) ನಮ್ಮ ಶಕ್ತಿಯನ್ನು ಹೇಗೆ ಸರ್ವತೋಮುಖವಾಗಿ ಹೆಚ್ಚಿಸಿಕೊಳ್ಳಬೇಕು? **ಉತ್ತರ:**______________________
8) "ಶಕ್ತಿಯೇ ಜೀವನ; ದುರ್ಬಲತೆಯೇ ಮರಣ" ಎಂದು ಹೇಳಿದವರು ಯಾರು? **ಉತ್ತರ:**______________________

**9 .ಕನ್ನಡ ವರ್ಣಮಾಲೆಯಲ್ಲಿರುವ ಅಕ್ಷರಗಳನ್ನು ಬರೆಯಿರಿ.**

**ಉತ್ತರ:**______________________

**10. ಕೊಟ್ಟಿರುವ ವ್ಯಂಜನಾಕ್ಷರಗಳಿಗೆ ಸ್ವರ ಸೇರಿಸಿ ಪದ ರಚಿಸಿ ಬರೆಯಿರಿ.**

* ಸ್+ಇ+ರ್+ಇ+ಕ್+ಅ+ನ್+ನ್+ಅ+ಡ್+ಅ = ________ * ಭ್+ಆ+ಗ್+ಯ್+ಅ+ದ್+ಅ = ________

**11. ಕೊಟ್ಟಿರುವ ಸಂಯುಕ್ತಾಕ್ಷರಗಳಲ್ಲಿ ಸಜಾತಿ ಸಂಯುಕ್ತಾಕ್ಷರ ಮತ್ತು ವಿಜಾತಿ ಸಂಯುಕ್ತಾಕ್ಷಗಳಾವುವು ಹೆಸರಿಸಿರಿ.**

* ಸ್ವಾತಂತ್ರ್ಯ – ________ * ಹಳ್ಳಿಮನೆ : ________
* ಸ್ವಾರಸ್ಯ – ________ * ಷಡಕ್ಷರಿ – ________

**12. ಕೆಳಗಿನ ವಿಶಿಷ್ಟ ಪದಪುಂಜಕ್ಕೆ ಅರ್ಥ ಬರೆದು, ಸ್ವಂತವಾಕ್ಯದಲ್ಲಿ ಬರೆಯಿರಿ.**

* ಬೆರಗಾಗು : ______________________
* ಪ್ರಶಸ್ತಿ : ______________________

**13. ಕೆಳಗಿನ ಲೇಖನ ಚಿಹ್ನೆಯನ್ನು ಹೆಸರಿಸಿರಿ.**

:– ಉತ್ತರ : ________ ( ) ಉತ್ತರ : ________

**14. ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

* ಮಳೆಗಾಲ ಉತ್ತರ : ________ * ದೇವಾಲಯ ಉತ್ತರ : ________

**15. ಕೆಳಗಿನ ಪದಗಳನ್ನು ಕೂಡಿಸಿ ಬರೆಯಿರಿ.**

* ಗುರು+ಅನ್ನು= ಉತ್ತರ : ______________________ * ದೇವ+ಇಂದ್ರ= ಉತ್ತರ : ______________________

**16. ಕೆಳಗಿನ ಪದಗಳಿಗೆ ವಿರುದ್ಧ ಪದ ಬರೆಯಿರಿ.**

* ಅಂತರಂಗ ಉತ್ತರ : ______________________ * ಜ್ಞಾನ ಉತ್ತರ : ______________________

17. **ಕೆಳಗಿನ ಪದಗಳ ವಚನ ಬದಲಿಸಿ ಬರೆಯಿರಿ.**

* ಪುಸ್ತಕ – __________ * ಅಣ್ಣ – __________ * ಶಾಲೆಗಳು – __________ * ಆಟಗಾರ – __________

**18. ಕೆಳಗಿನ ವಾಕ್ಯಗಳಲ್ಲಿ ಕರ್ತೃಪದ, ಕರ್ಮಪದ ಮತ್ತು ಕ್ರಿಯಾಪದಗಳನ್ನು ಗುರುತಿಸಿ ಬರೆಯಿರಿ.**

* ಕೇಶವನು ಕುಂಬಳಕಾಯಿಯನ್ನು ಕೊಯ್ದನು.

ಉತ್ತರ : **ಕರ್ತೃಪದ :**________ **ಕರ್ಮಪದ :** __________ **ಕ್ರಿಯಾಪದ :** __________

* ಅಧ್ಯಾಪಕರು ಪಾಠವನ್ನು ಬೋಧಿಸಿದರು.

ಉತ್ತರ : **ಕರ್ತೃಪದ :**________ **ಕರ್ಮಪದ :** __________ **ಕ್ರಿಯಾಪದ :** __________

**19. ಈ ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.** .

* ಕಷ್ಟಪಟ್ಟರೆ ಫಲವುಂಟು * ಅತಿಯಾಸೆ ಗತಿಗೇಡು * ಕಾಯಕವೇ ಕೈಲಾಸ

**ಉತ್ತರ:**______________________________________________

______________________________________________

______________________________________________

______________________________________________

______________________________________________

______________________________________________

______________________________________________

______________________________________________

______________________________________________

______________________________________________

**20. ನೀವು ಧಾರವಾಡ ಸರಕಾರಿ ಪ್ರೌಢ ಶಾಲೆಯಲ್ಲಿ ಓದುತ್ತಿರುವ ನವೀನ/ನವ್ಯಾ ಎಂದು ಭಾವಿಸಿ ಶೈಕ್ಷಣಿಕ ಪ್ರವಾಸಕ್ಕೆ ಹೋಗಲು 1000 ರೂಪಾಯಿ ಕಳಿಸಿಕೊಡುವಂತೆ ಗದಗದ ಗಾಂಧೀ ನಗರದಲ್ಲಿ ವಾಸವಾಗಿರುವ ನಿಮ್ಮ ತಂದೆ ಭರತಕುಮಾರ ಅವರಿಗೊಂದು ಪತ್ರ ಬರೆಯಿರಿ. ಅಥವಾ**

**ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ.**

* ಕಂಪ್ಯೂಟರ * ಗ್ರಂಥಾಲಯ * ರಾಷ್ಟ್ರೀಯ ಹಬ್ಬಗಳು

**ಉತ್ತರ:**______________________________________________

______________________________________________

______________________________________________

______________________________________________

______________________________________________

______________________________________________

______________________________________________

______________________________________________

______________________________________________

______________________________________________

______________________________________________

______________________________________________

______________________________________________

______________________________________________

______________________________________________

______________________________________________

______________________________________________

______________________________________________

______________________________________________